ಸೇವೆ ಸಲ್ಲಿಸುತ್ತಿರುವ ಲಕ್ಷ್ಮಮ್ಮಳಿಗೆ ರಾಯರು ಅಭಿನಂದನಾ ಕಾರ್ಯಕ್ರಮ ಏರ್ಪಡಿಸಿದ್ದರು.

‘ಇಂದು ನನ್ನ ಯಶಸ್ಸಿನ ಹಾದಿಯಲ್ಲಿ ನನ್ನ ತಾಯಿಯಂತಿರುವ ಲಕ್ಷ್ಮಮ್ಮನವರ ಪಾತ್ರವೂ ಮಹತ್ವದ್ದಾಗಿದೆ’ ಎಂದಾಗ, ಸರ್, ‘ನನ್ನದೇನಿದೆ ಎಲ್ಲಾ ನಿಮ್ಮ ಸೇವೆ, ಅದಕ್ಕೆ ನನ್ನದು ಅಳಿಲು ಕೊಡುಗೆ’ ಎಂದು ಸಂತಸದ ಕಣ್ಣೀರು ಸುರಿಸಿದ್ದಳು.

ಕಾರ್ಯಕ್ರಮದ ಬಳಿಕ ಮಧ್ಯಾಹ್ನ ರಘುರಾಮರಾಯರು ಎಮರ್ಜೆನ್ಸಿ ಶಸ್ತ್ರಚಿಕಿತ್ಸೆಯಲ್ಲಿ ತೊಡಗಿದ್ದರು. ಇದು ಅವರಿಗೆ ಇಂಪಾರ್ಟೆಂಟ್ ಆಪರೇಷನ್ ಆಗಿತ್ತು. ತಾಯಿ ಮಗುವಿನ ಜೀವದ ಪ್ರಶ್ನೆಯಾಗಿತ್ತು. ಎರಡು ಗಂಟೆಗಳ ಆಪರೇಷನ್ ತರುವಾಯ ಆಕೆಯ ಗಂಡನಿಗೆ, ‘ಆಪರೇಷನ್ ಸಕ್ಸಸ್ ಇನ್ನೇನು ಭಯಪಡುವ ಅಗತ್ಯವಿಲ್ಲ. ತಾಯಿ ಮಗು ಇಬ್ಬರು ಸೇಫ್. ನಿಮ್ಮ ಮನೆಗೆ ಲಕ್ಷ್ಮೀ ಆಗಮಿಸಿದ್ದಾಳೆ’ ಎಂಬ ಸಂತಸದ ವಿಷಯ ಹೇಳಿದರು.



ಮಗುವಿನ ತಂದೆ, ‘ಥ್ಯಾಂಕ್ ಯು ಸರ್, ನೀವು ನಮ್ಮ ಪಾಲಿಗೆ ದೇವರಿಗೆ ಸಮ’ ಎಂದು ನಗುವಿನ ಧನ್ಯವಾದ ಹೇಳಿದ್ದರು.

‘ಕೃತಜ್ಞತೆ ನನಗೆ ಸಲ್ಲಿಸುವ ಅಗತ್ಯವಿಲ್ಲ. ನಮ್ಮದೇನಿದೆ, ನಾನು ಕೇವಲ ಒಬ್ಬ ಮನುಷ್ಯ, ನಾನು ನಿರ್ವಹಿಸುವ ಕರ್ತವ್ಯ ಮಾಡಿದ್ದೇನೆ, ಉಳಿದುದೆಲ್ಲ ದೇವರದ್ದು’ ಎಂದಿದ್ದರು. ಈ ಆಪರೇಷನ್‌ನಲ್ಲಿ ಲಕ್ಷ್ಮಮ್ಮ ಭಾಗಿಯಾಗಿರಲಿಲ್ಲ. ಕಾರ್ಯಕ್ರಮದ ಬಳಿಕ ಯಾವುದೋ ಕೆಲಸದ ನಿಮಿತ್ತ ಹೊರ ಹೋಗಿದ್ದರು. ಹೆಣ್ಣು ಮಗು ಹುಟ್ಟಿದ್ದು ರಾಯರಿಗೆ ಲಕ್ಷ್ಮಮ್ಮನವರ ಅನುಪಸ್ಥಿತಿಯನ್ನು ಜ್ಞಾಪಿಸಿತ್ತು.

ಆಪರೇಷನ್ ಮುಗಿಸಿ ಊಟಕ್ಕೆ ಕೂರಬೇಕೆನ್ನುವ ಹೊತ್ತಿಗೆ ಒಬ್ಬ ಯುವತಿ ಗುಂಡೇಟು ತಿಂದು ರಕ್ತದ ಮಡುವಿನಲ್ಲಿ ಮಲಗಿದ್ದಳು. ಸ್ನೇಹಿತೆಯರು ಅವಳನ್ನು ಕರೆದು ತಂದು ರಾಯರ ಆಸ್ಪತ್ರೆಗೆ ಸೇರಿಸಿದ್ದರು. ಅವರಲ್ಲೊಬ್ಬಳು, ‘ಸರ್, ಇವಳು ಸಹನಾ, ನನ್ನ ಸ್ನೇಹಿತೆ ಯಾವುದೋ ಕಾರಣ ತಿಳಿದಿಲ್ಲ ಈಕೆಯನ್ನು ಯಾರೋ ಶೂಟ್ ಮಾಡಿದ್ದಾರೆ. ಈ ದುರ್ಘಟನೆ ನಡೆಯುವಾಗ ನಾವ್ಯಾರು ಕಾಲೇಜಿನಲ್ಲಿ ಇರಲಿಲ್ಲ, ಸರ್ ದಯಮಾಡಿ ಸಹನಾಳನ್ನು ಉಳಿಸಿಕೊಡಿ’ ಎಂದು ಅಂಗಲಾಚುತ್ತಾ ಪರಿಪರಿಯಾಗಿ ಬೇಡಿಕೊಂಡಳು ಸ್ನೇಹಿತೆ ಅದಿತಿ.

ಏದುಸಿರು ಬಿಡುತ್ತಾ ಆಸ್ಪತ್ರೆ ಸಿಬ್ಬಂದಿ ಸ್ಟ್ರೆಚರ್ ತಂದು ಸಹನಾಳನ್ನು ಸ್ಟ್ರೆಚರ್‌ಗೆ ವರ್ಗಾಯಿಸಿದ್ದರು. ರಕ್ತದ ಮುದ್ದೆಯಾಗಿದ್ದ ಸಹನಾ ಉಚ್ಛ್ವಾಸ ನಿಚ್ವಾಸ ಮಾಡುತ್ತಿದ್ದಳು, ತನ್ನನ್ನು ಬದುಕಿಸುವಂತೆ ಆಂಗಿಕ ಚಲನೆಯಿಂದ ನಿರ್ಗತಿಕಳಾಗಿ ಕೈಮುಗಿಯುತ್ತಿದ್ದಳು. ರಘುರಾಮರಾಯರು ಆಕೆಯ ಸ್ನೇಹಿತರಿಗೆ, ‘ಹೆದರಬೇಡಿ, ನಿಮ್ಮ ಸ್ನೇಹಿತೆ ಆರೋಗ್ಯವಾಗಿ ಮರಳುವಳು ಧೈರ್ಯವಾಗಿರಿ’ ಎಂದು ಹೇಳುತ್ತಾ ಆಪರೇಷನ್ ಥಿಯೇಟರ್ ಕಡೆಗೆ ಹೆಜ್ಜೆಹಾಕಿದರು. ತದೇಕಚಿತ್ತದಿಂದ, ಡಾಕ್ಟರ್ ಮೇಲಿನ ನಂಬಿಕೆಯಿಂದ ಆಕೆಯ ಸ್ನೇಹಿತರು ಅವರತ್ತ ನೋಡುತ್ತಾ ನಿಂತರು.

ಡಾಕ್ಟರ್ ಸಹನಾಳ ಬಳಿ ಹೋಗುವ ಹೊತ್ತಿಗೆ ಆಕೆಯ ಪ್ರಾಣಪಕ್ಷಿ ಹಾರಿಹೋಗಿತ್ತು. ರಾಯರು ಸಹನಾಳ ಸ್ನೇಹಿತರಿಗೆ, ‘ಸಾರಿ’ ಎಂದು ಗದ್ಗದಿತ ಕಂಠದಿಂದ ಉತ್ತರ ಹೇಳಿದ್ದರು. ದುಃಖತಪ್ತರಾದ ಸ್ನೇಹಿತರು ಸಹನಾಳ ಒಡನಾಟದ ಬಾಂಧವ್ಯ ನೆನೆಯುತ್ತಾ ಕಣ್ಣೀರು ಹಾಕಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ನಡೆದ ಘಟನೆಯ ಕುರಿತು ಮಾಹಿತಿ ಪಡೆದಿದ್ದರು. ಸಹನಾಳ ಸಾವು ಸಹನೆ ಮೀರಿದ, ತಂದೆ ತಾಯಿಯ ಉಪಸ್ಥಿತಿಯಲ್ಲಿ ಆಕೆಯ ಶವದ ಅಂತಿಮ ಸಂಸ್ಕಾರವಾಗಿತ್ತು.

ಸಹನಾ ಕಡುಬಡತನದ ಪ್ರತಿಭೆ, ಪ್ರತಿಭಾವಂತ ಹುಡುಗಿ ತಂದೆ ತಾಯಿಗೆ ಒಬ್ಬಳೇ ಮಗಳು. ಸೌಮ್ಯ ಸ್ವಭಾವಿ ಸದ್ಗುಣವುಳ್ಳವಳು. ಕಾಲೇಜಿನಲ್ಲಿ ಆಕೆಯ ಸ್ನೇಹಿತರು, ಉಪನ್ಯಾಸಕರಿಂದ ಶಹಬ್ಬಾಸ್‌ಗಿರಿ ಪಡೆದಿದ್ದಳು. ವೈದ್ಯಳಾಗುವ ಕನಸು ಹೊತ್ತವಳು.

‘ಸಹನಾ, ನೀನು ಶ್ರದ್ಧೆಯಿಂದ ಓದಿ ಡಾಕ್ಟರಾಗಿ ನಮ್ಮಂತಹ ಬಡ ಜನರ ಸೇವೆ ಮಾಡಬೇಕು, ಒಳ್ಳೆಯ ಹೆಸರು ಪಡೆಯಬೇಕು’ ಎಂಬ ಸದ್ವಿಚಾರ ಹೇಳುತ್ತಿದ್ದರು ತಂದೆ ಬಸವರಾಜಪ್ಪ.

ಪೋಷಕರ ಮಾತು ಮೀರದ ಮಗಳು, ‘ಆಗಲಿ ಅಪ್ಪ, ನಿಮ್ಮ ಆಸೆ ಈಡೇರಿಸುತ್ತೇನೆ, ನೀವು ತೋರಿದ ಮಾರ್ಗದರ್ಶನದಲ್ಲಿ ನಡೆಯುತ್ತೇನೆ. ನಿಮ್ಮಿಬ್ಬರ ಮಾತು ಎಂದಿಗೂ ಮೀರುವುದಿಲ್ಲ’ ಎಂದು ತಿಳಿಸಿದ್ದಳು. ತಾಯಿ ಸುಶೀಲಾ, ಮಗಳನ್ನು ತಬ್ಬಿ ಆನಂದಭಾಷ್ಪ ಸುರಿಸಿದ್ದಳು. ಸಹನಾ ಓದಿನಲ್ಲಿ ಮಾತ್ರವಲ್ಲ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಸದಾ ಮುಂದು. ಭರತನಾಟ್ಯದಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದ ಕೀರ್ತಿ ಈಕೆಯದ್ದು.

ಆಗ ತಾನೇ ತರಗತಿಗೆ ಆಗಮಿಸಿದ ಪ್ರಾಂಶುಪಾಲರು, ‘ಈ ಬಾರಿ ಭರತನಾಟ್ಯದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹನಾ ಆಯ್ಕೆಯಾಗಿದ್ದಾಳೆ. ಕಂಗ್ರಜುಲೇಶನ್ಸ್ ಸಹನಾ’ ಎಂದು ಅಭಿನಂದಿಸಿದರು.

‘ಥ್ಯಾಂಕ್ ಯು ಸರ್’ ಎಂದಾಗ ತರಗತಿಯಲ್ಲಿ ಎಲ್ಲಾ ಕಡೆ ಕರತಾಡನ ಮೊಳಗಿತ್ತು. ಸಹನಾಳನ್ನು ಅದೇ ಕಾಲೇಜಿನ ಅನಿಲ್ ಎಂಬ ಸುಂದರ ಯುವಕ ಪ್ರೀತಿಸುತ್ತಿದ್ದ. ‘ಐ ಲವ್ ಯು’ ಎಂದು ಹಲವು ಬಾರಿ ಪ್ರೀತಿ ನಿವೇದನೆ ಮಾಡಿದ್ದ.

‘ನನಗೆ ಲವ್ ಮ್ಯಾರೇಜ್ ಎಂದರೆ ಇಷ್ಟವೇ ಇಲ್ಲ, ನಾನು ತಂದೆ ತಾಯಿಯನ್ನು ಹೆಚ್ಚು ಪ್ರೀತಿಸುತ್ತೇನೆ, ಅವರು ತೋರಿಸಿದ ಹುಡುಗನನ್ನು ವರಿಸುತ್ತೇನೆ’ ಎಂದು ಅನಿಲ್ ಪ್ರೀತಿಯನ್ನು ನಯವಾಗಿ ತಿರಸ್ಕರಿಸಿದ್ದಳು.

ಒಂದು ದಿನ ಪಟ್ಟುಬಿಡದ ಅನಿಲ್, ‘ನಾವಿಬ್ಬರೂ ಮದುವೆಯಾಗೋಣ, ನಿಮ್ಮ ಮನೆಗೆ ಬಂದು ಮಾತನಾಡುತ್ತೇನೆ’ ಎಂದು ಹೇಳಿದ್ದ. ಒಂದು ದಿನ ಸಂಜೆ ಸಹನಾಳ ಮನೆಗೆ ತಂದೆಯೊಂದಿಗೆ ಆಗಮಿಸಿದ್ದ.

‘ನಮಸ್ತೆ ಅಂಕಲ್, ನಾನು ಅನಿಲ್ ಸಹನಾಳ ಸ್ನೇಹಿತ, ಇವರು ನಮ್ಮ ತಂದೆ ಗಣಪತಿರಾವ್ ಪ್ರಖ್ಯಾತ ವಕೀಲರು’ ಎಂದ.

ಸಹನಾ ತಂದೆ ಬಸವರಾಜಪ್ಪ ಸಹ, ‘ನಮಸ್ತೆ, ಒಳಗೆ ಬನ್ನಿ’ ಎಂದು ಸ್ವಾಗತ ಮಾಡಿದರು.

‘ಏನು ವಿಷಯ ಹೇಳಿ’.

‘ಅಂಕಲ್, ನಾನು ನಿಮ್ಮ ಮಗಳನ್ನು ಮದುವೆಯಾಗಬೇಕು ಎಂದು ಬಯಸುತ್ತೇನೆ, ಆಕೆಯನ್ನು ತುಂಬಾ ಪ್ರೀತಿಸುತ್ತೇನೆ, ಸಹನಾ ತಂದೆ ತಾಯಿ ಸೂಚಿಸಿದ ಹುಡುಗನನ್ನೇ ಮದುವೆ ಆಗುತ್ತೇನೆ ಎಂದಳು, ಅದಕ್ಕೆ ಬಂದೆ. ನಿಮ್ಮ ನಿರ್ಧಾರ ಹೇಳಿ ಅಂಕಲ್’ ಎಂದ.

ಅದಕ್ಕೆ ಬಸವರಾಜಪ್ಪ, ಒಳ್ಳೆಯ ಹುಡುಗ, ಶ್ರೀಮಂತ ಮದುವೆ ಮಾಡಿಕೊಟ್ಟರೆ ನಮ್ಮ ಮಗಳು ಸುಖವಾಗಿರಬಹುದೆಂದು ಭಾವಿಸಿ, ಮದುವೆಗೆ ಒಪ್ಪಿಗೆ ನೀಡಿದ್ದರು. ತಾಯಿಯ ಬೆನ್ನ ಹಿಂದೆ ನಿಂತಿದ್ದ ಸಹನಾ ನಾಚಿ ಒಳಗೆ ಹೋಗಿದ್ದಳು. ಇದೇ ಸಂಭ್ರಮದಲ್ಲಿ ಸಹನಾ– ಅನಿಲ್ ಜೋಡಿಯ ನಿಶ್ಚಿತಾರ್ಥ ನಡೆದಿತ್ತು. ನಿಶ್ಚಿತಾರ್ಥ ನಡೆದ ಒಂದು